**ಕರ್ನಾಟಕಸರ್ಕಾರ**

**ರಾಷ್ಟ್ರೀಯ ಸೇವಾ ಯೋಜನೆ**

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

ಸಂಖ್ಯೆ: ಪಪೂಶಿಇ/ರಾಸೇಯೋ/85/2018-19 ದಿನಾಂಕ: 29-09-2018

ಗೆ,

ಪ್ರಾಂಶುಪಾಲರು

ಮಾನ್ಯರೆ,

**ವಿಷಯ:** ದಿನಾಂಕ:02.10.2018ರ ಗಾಂಧೀ ಜಯಂತಿಯ ಸಂಧರ್ಭದಲ್ಲಿ ಬಾ-ಬಾಪು-150ನೇ ವರ್ಷಾಚರಣೆ ಮತ್ತು ರಾ.ಸೇ.ಯೋ. ರಾಜ್ಯ ಮಟ್ಟದ ಸುವರ್ಣ ಮಹೋತ್ಸವ ಉದ್ಘಾಟನಾ ಸಮಾರಂಭಕ್ಕೆ ಸ್ವಯಂ ಸೇವಕರು ಮತ್ತು ಎನ್.ಎಸ್.ಎಸ್ ಅಧಿಕಾರಿಗಳು ಭಾಗವಹಿಸುವ ಬಗ್ಗೆ

**ಉಲ್ಲೇಖ:** ಯುಸೇಇ/ರಾಸೇಯೋ/2018-19/234

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಭಾರತಕ್ಕೆ ಅಲ್ಲದೇ ವಿಶ್ವಕ್ಕೆ ತಮ್ಮ ಸತ್ಯ ಅಹಿಂಸಾ ತತ್ವ ಶಾಂತಿ ಸಿದ್ಧಾಂತಗಳನ್ನು ನೀಡಿದ ಮಹಾತ್ಮ ಗಾಂಧೀಜಿ ರವರ 150ನೇ ವರ್ಷಾಚರಣೆ ಕಾರ್ಯಕ್ರಮವನ್ನು ರಾಷ್ಟ್ರಾದ್ಯಂತ ಆಚರಿಸಲು ಭಾರತ ಸರ್ಕಾರ ಸಿದ್ಧತೆ ನಡೆಸಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಸಹ ಕಾರ್ಯೋನ್ಮುಖವಾಗಿದೆ. ಅದರಂತೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯು ಮಹಾತ್ಮ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದಲ್ಲಿ ಅವರಿಗೆ ಸ್ಫೂರ್ತಿಯಾಗಿ ಅವರ ಸಹವರ್ತಿಯಾಗಿ ಕಸ್ತೂರ ಬಾ ಗಾಂಧೀ ಅವರು ಪಾಲ್ಗೊಂಡಿದ್ದನ್ನು ಸ್ಮರಿಸಲೋಸುಗ ಈ 150ನೇ ವರ್ಷಾಚರಣೆಯನ್ನು ಬಾ ಮತ್ತು ಬಾಪು 150 ಎಂದು ರಾಜ್ಯಾದ್ಯಂತ ಆಚರಣೆ ಮಾಡಲು ಸಿದ್ಧತೆ ಮಾಡಿಕೊಂಡಿದೆ. ಇದರೊಂದಿಗೆ ರಾಷ್ಟ್ರೀಯ ಸೇವಾ ಯೋಜನೆಯು ರಾಜ್ಯ ಮಟ್ಟದಲ್ಲಿ ಸುವರ್ಣ ಮಹೋತ್ಸವದ ಆಚರಣೆಗೆ ಚಾಲನೆ ನೀಡಲಿಧೆ.

ಸದರಿಯವರು ಬೆಳಿಗ್ಗೆ 9.00ಕ್ಕೆ ಬೆಂಗಳೂರಿನ ಆನಂದರಾವ್ ವೃತ್ತದಿಂದ ಗಾಂಧೀ ಭವನದವರೆಗೆ ಸದ್ಭಾವನಾ ಯಾತ್ರೆಯನ್ನು ಹಮ್ಮಿಕೊಂಡಿದ್ದು ಬಳಿಕ ಗಾಂಧಿ ಜಯಂತಿ ಕಾರ್ಯಕ್ರಮದ ಪ್ರಯುಕ್ತ ಸಭೆ ನಡೆಯಲಿದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರೆ ಗಣ್ಯರು ಭಾಗವಹಿಸುತ್ತಾರೆ.

ತಮ್ಮ ಕಾಲೇಜಿನಿಂದ 25 ಸ್ವಯಂ ಸೇವಕಿಯರನ್ನು ಹಾಗೂ 25ಸ್ವಯಂ ಸೇವಕರನ್ನು ನಿಯೋಜಿಸಲು ಕೋರಿದೆ. ಸ್ವಯಂಸೇವಕರು / ಕಾರ್ಯಕ್ರಮ ಅಧಿಕಾರಿಗಳು ಬಿಳಿ ವಸ್ತ್ರಧಾರಿಯಾಗಿ ಭಾಗವಹಿಸುವುದು ಸೂಕ್ತವಾಗಿದೆ. ಎಲ್ಲರಿಗೂ ಗಾಂಧೀ ಟೋಪಿಯನ್ನು ಒದಗಿಸಲಾಗುವುದು ಮತ್ತು ಬೆಳಗಿನ ಉಪಹಾರ ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಹೋಗಿಬರುವ ವೆಚ್ಚವನ್ನು ಅಧಿಕಾರಿಗಳು ದೈನಂದಿನ ಅನುದಾನದಿಂದ ಭರಿಸುವುದು.

ಈ ಕಾರಣದಿಂದ ದಿನಾಂಕ:02.10.2018ರಂದು ಗಾಂಧೀ ಸ್ಮಾರಕ ನಿಧಿ ಇವರ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಹಕಾರದೊಂದಿಗೆ ಬೆಂಗಳೂರಿನ ಗಾಂಧೀಭವನದಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿದೆ. ಅದರ ವಿವರಗಳು ಈ ಕೆಳಗಿನಂತಿವೆ.

1.ಅಂದು ಬೆಳಿಗ್ಗೆ 08.30ರಿಂದ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಗಾಂಧೀ ಪ್ರತಿಮೆಯಿಂದ ಆನಂದರಾವ್ ಸರ್ಕಲ್ ನಲ್ಲಿರುವ ಗಾಂಧೀ ಪ್ರತಿಮೆಯವರೆಗೆ ಶಾಂತಿ-ಸಾಮರಸ್ಯ ಬೈಕ್ ರ್‍ಯಾಲಿಯನ್ನು ಏರ್ಪಡಿಸಲಾಗಿದೆ.

2. ಪ್ರತಿ ವರ್ಷಾದಂತೆ ಆನಂದರಾವ್ ಸರ್ಕಲ್ ಗಾಂಧೀ ಪ್ರತಿಮೆಯಿಂದ ಶಾಂತಿ-ಸಾಮರಸ್ಯ ಮೆರವಣಿಗೆಯನ್ನು ಬೆಳಿಗ್ಗೆ 09.30ರಿಂದ ಆಯೋಜಿಸಲಾಗಿದೆ.

3. ಬೆಳಿಗ್ಗೆ 10.30ರಿಂದ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆ ಅಂಗವಾಗಿ ಬಾ-ಬಾಪು -150 ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಮಟ್ಟದ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಏರ್ಪಡಿಸಲಾಗಿದೆ.

ಇಂತಿ ತಮ್ಮ ವಿಶ್ವಾಸಿ

**ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು**
**ಪದವಿ ಪೂರ್ವ ಶಿಕ್ಷಣ ಇಲಾಖೆ**
**ಬೆಂಗಳೂರು.**

ಪ್ರತಿಗಳು:

1. ಪ್ರಾಂಶುಪಾಲರು ಶೇಷಾದ್ರಿಪುರಂ ಪ.ಪೂ.ಕಾಲೇಜು ಬೆಂಗಳೂರು
2. ಪ್ರಾಂಶುಪಾಲರು ಬಿಇಎಲ್ ಪ.ಪೂ.ಕಾಲೇಜು ಜಾಲಹಳ್ಳಿ ಬೆಂಗಳೂರು
3. ಪ್ರಾಂಶುಪಾಲರು ರಾಜಾಜಿನಗರ ಪ.ಪೂ.ಕಾಲೇಜು ರಾಜಾಜಿನಗರ ಬೆಂಗಳೂರು
4. ಪ್ರಾಂಶುಪಾಲರು ಸರ್ಕಾರಿ ಬಾಲಕರ ಪ.ಪೂ.ಕಾಲೇಜು 18ನೇ ಅಡ್ಡರಸ್ತೆ ಬೆಂಗಳೂರು
5. ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.

3\. ಕಛೇರಿ ಪ್ರತಿ.